ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-145 ರ ಕ್ರಮ ಸಂಖ್ಯೆ-132
ನಿ-72

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ.**

ವಿಷಯ: "ಕರ್ನಾಟಕ ರಾಜ್ಯದಲ್ಲಿ ಅಧಿಕ ಪ್ರಮಾಣದಲ್ಲಿ ಅಪೌಷ್ಠಿಕತೆಯಿಂದ ಮಕ್ಕಳು ಬಳಲುತ್ತಿರುವುದಾಗಿ ವರದಿಯಾಗಿದೆ. ರಾಜ್ಯದ 31 ಜಿಲ್ಲೆಗಳ ಪೈಕಿ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಮತ್ತು ಬೀದರ್ ಈ ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5 ಅಂಕಿ-ಅಂಶಗಳ ಪ್ರಕಾರ 5 ವರ್ಷದ ಮಕ್ಕಳಲ್ಲಿ ಕುಂಠಿತ ಬೆಳವಣಿಗೆ, ಅತೀ ಕಡಿಮೆ ತೂಕ ಮತ್ತು ಅಪೌಷ್ಠಿಕತೆ ಇದ್ದು, 2015-16ನೇ ಸಾಲಿನಲ್ಲಿ ಇದ್ದ ಮಟ್ಟದಿಂದ 2019-20 ರವರೆಗಿನ ಮಟ್ಟದಲ್ಲಿ ಯಾವುದೇ ಸುಧಾರಣೆಯಾಗಿರುವುದಿಲ್ಲ.

ಅಲ್ಲದೇ, ಕೇಂದ್ರ ಸರ್ಕಾರದಿಂದ ರೂಪಿತವಾಗಿರುವ "ಪೋಷಣ್ ಟ್ರ್ಯಾಕರ್" ಅಭಿಯಾನ ತಂತ್ರಾಂಶ ಅಂಗನವಾಡಿಗಳಿಂದ ಅಗತ್ಯವಿರುವ ಅಂಕಿ-ಅಂಶಗಳನ್ನು ಕಲೆಹಾಕಲು ವಿಫಲವಾಗಿದೆ. ಕೋರೋನಾ ಸೋಂಕು ಹರಡುವಿಕೆಯಿಂದ ಗರ್ಭಿಣಿ, ಬಾಣಂತಿ ಮತ್ತು ಹಸುಗೂಸುಗಳು ಬಳಲಿ-ಸೊರಗಿ ಹೋಗಿ ಅವರಲ್ಲಿ ಅಪೌಷ್ಠಿಕತೆ ಹೆಚ್ಚಾಗುತ್ತಿದೆ. ಇಂತಹ ಪ್ರಕರಣಗಳನ್ನು ಪೋಷಣ್ ಅಭಿಯಾನ ಅಡಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪರಿಶೀಲಿಸಲು ಒಂದು ಕಾರ್ಯಪಡೆಯ ಅವಶ್ಯವಾಗಿದ್ದು, ಈ ಜರೂರು ಮಹತ್ವದ ವಿಷಯದ"

## ಉತ್ತರ

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ, ಮತ್ತು ಕಿಶೋರಿಯರ ಸರ್ವೋತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4 ಮತ್ತು 5 ನ್ನು ಹೋಲಿಕೆ ಮಾಡಿದಾಗ ಕರ್ನಾಟಕ ರಾಜ್ಯವು ಎಲ್ಲಾ ನಾಲ್ಕೂ ಮಾನದಂಡಗಳಲ್ಲಿಯೂ(parameters) ಸಹ ಸುಧಾರಣೆಯಾಗಿರುವುದು ಕಂಡುಬಂದಿರುತ್ತದೆ. ಮಾಹಿತಿ ಕೆಳಕಂಡಂತಿರುತ್ತದೆ.

| ಮಾನದಂಡಗಳು | ರಾಷ್ಟ್ರೀಯ ಸಮೀಕ್ಷೆ-4 | ರಾಷ್ಟ್ರೀಯ ಸಮೀಕ್ಷೆ-5 |
|---|---|---|
| Stunting | 36.2 | 35.4 |
| Wasting | 26.1 | 19.5 |
| Severe wasting | 10.5 | 8.4 |
| Under weight | 35.2 | 32.9 |

ರಾಜ್ಯದಲ್ಲಿ 204 ಯೋಜನೆಗಳಡಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 66361 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

- ಪೋಷಣ್ ತಂತ್ರಾಂಶದ ಮೂಲಕ ಗುರುತಿಸಲಾದ ರಾಜ್ಯದಲ್ಲಿ 6 ವರ್ಷ ದೊಳಗಿನ ಅಪೌಷ್ಠಿಕತೆಯಿಂದ ಬಳಲುತ್ತಿರುವ ಒಟ್ಟು ಮಕ್ಕಳ ಸಂಖ್ಯೆ 38181.
- ಪೋಷಣ್ ಟ್ರ್ಯಾಕರ್‌ನಲ್ಲಿ ಗುರುತಿಸಲಾದ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಅಪೌಷ್ಠಿಕ ಮಕ್ಕಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಜಿಲ್ಲೆ | ತೀವ್ರ ಅಪೌಷ್ಠಿಕ ಮಕ್ಕಳು |
|---|---|---|
| 1 | ಕಲ್ಬುರ್ಗಿ | 1370 |
| 2 | ರಾಯಚೂರು | 2723 |
| 3 | ಕೊಪ್ಪಳ | 2308 |
| 4 | ಬಳ್ಳಾರಿ | 3805 |
| 5 | ಯಾದಗಿರಿ | 1535 |
| 6 | ಬೀದರ್ | 1113 |
| | **ಒಟ್ಟು** | **12854** |

- ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(NFHS)-04 (2015-16) ಮತ್ತು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(NFHS)-05 (2019-20) ರ ಅಂಕಿ-ಅಂಶಗಳ ಮಾಹಿತಿ ವಿವರ ಈ ಕೆಳಕಂಡಂತಿದೆ.

| **Stunting (ಉದ್ದ/ಎತ್ತರ ಅಳೆದು ಗುರುತಿಸಿದ ಮಕ್ಕಳು (ಸ್ಟಂಟಿಂಗ್)** | | | |
|---|---|---|---|
| **ಕ್ರ.ಸಂ.** | **ಜಿಲ್ಲೆಯ ಹೆಸರು** | **NFHS-4 2015-16** | **NFHS-5 2019-20** |
| 1 | ಯಾದಗಿರಿ | 55.5 | 57.6 |
| 2 | ಕೊಪ್ಪಳ | 55.8 | 49.1 |
| 3 | ರಾಯಚೂರು | 37.2 | 39.8 |
| 4 | ಬೀದರ್ | 42.8 | 36.8 |
| 5 | ಬಳ್ಳಾರಿ | 49.5 | 36.1 |
| 6 | ಕಲ್ಬುರ್ಗಿ | 52.2 | 34.5 |

| Wasting (ಉದ್ದ/ಎತ್ತರಕ್ಕೆ ತಕ್ಕಂತೆ ತೂಕ ಹೊಂದಿರದ ಮಕ್ಕಳು (ವೇಸ್ಟಿಂಗ್) | | | |
|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | NFHS-4 2015-16 | NFHS-5 2019-20 |
| 1 | ಕಲ್ಬುರ್ಗಿ | 34 | 25 |
| 2 | ರಾಯಚೂರು | 34.9 | 23.2 |
| 3 | ಕೊಪ್ಪಳ | 26.4 | 23.1 |
| 4 | ಬಳ್ಳಾರಿ | 26.9 | 22.9 |
| 5 | ಬೀದರ್ | 23.6 | 22.1 |
| 6 | ಯಾದಗಿರಿ | 31.3 | 17.7 |

| Severely wasted (ಉದ್ದ/ಎತ್ತರಕ್ಕೆ ತಕ್ಕಂತೆ ತೂಕ ಹೊಂದಿರದ ತೀವ್ರತರದ ಮಕ್ಕಳು) | | | |
|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | NFHS-4 2015-16 | NFHS-5 2019-20 |
| 1 | ಬಳ್ಳಾರಿ | 10.7 | 13.6 |
| 2 | ಕಲ್ಬುರ್ಗಿ | 13.2 | 12.2 |
| 3 | ರಾಯಚೂರು | 18.1 | 11.7 |
| 4 | ಬೀದರ್ | 11.4 | 11.1 |
| 5 | ಯಾದಗಿರಿ | 12.5 | 7.2 |
| 6 | ಕೊಪ್ಪಳ | 10.8 | 3.8 |

| Underweight (ಗುರುತಿಸಲಾದ ಕಡಿಮೆ ತೂಕದ ಮಕ್ಕಳು) | | | |
|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | NFHS-4 2015-16 | NFHS-5 2019-20 |
| 1 | ಬಳ್ಳಾರಿ | 53.3 | 36.5 |
| 2 | ಕಲ್ಬುರ್ಗಿ | 56.7 | 36.2 |
| 3 | ರಾಯಚೂರು | 41.2 | 40.7 |
| 4 | ಬೀದರ್ | 39.4 | 36.1 |
| 5 | ಯಾದಗಿರಿ | 50.3 | 45.2 |
| 6 | ಕೊಪ್ಪಳ | 49.9 | 45.8 |

- ಕೇಂದ್ರ ಸರ್ಕಾರದಿಂದ ಏಪ್ರಿಲ್-2021 ರಲ್ಲಿ ಜಾರಿಗೆ ತರಲಾದ "ಪೋಷಣ್ ಟ್ರ್ಯಾಕರ್" ತಂತ್ರಾಂಶದ ಮೂಲಕ ಗರ್ಭಿಣಿ, ಬಾಣಂತಿ ಮತ್ತು ಮಕ್ಕಳ ಮಾಹಿತಿಯನ್ನು ದಾಖಲಿಸಲಾಗುತ್ತಿದೆ. ಈ ತಂತ್ರಾಂಶದ ಮೂಲಕ ಅಪೌಷ್ಠಿಕ ಮಕ್ಕಳನ್ನು ಸಹ ಗುರುತಿಸಲಾಗುತ್ತಿದೆ. ಸದರಿ ಮಾಹಿತಿಯನ್ನು ಪೋಷಣ್ ಟ್ರ್ಯಾಕರ್‌ನಲ್ಲಿ ದಾಖಲಿಸಲು ಮೇಲ್ವಿಚಾರಕಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡಲಾಗಿದೆ.

- ಮೇಲಿನ ಅಂಕಿ-ಅಂಶಗಳಂತೆ, ಈ 6 ಜಿಲ್ಲೆಗಳಲ್ಲಿ ಸ್ಟಂಟಿಂಗ್, ವೇಸ್ಟಿಂಗ್, ಅತೀ ಕಡಿಮೆ ತೂಕದ ಮಕ್ಕಳ ಮಾಹಿತಿಯನ್ನು ಪರಿಶೀಲಿಸಲಾಗಿ, ಬಹಳಷ್ಟು ಜಿಲ್ಲೆಗಳಲ್ಲಿ ಸುಧಾರಣೆಯಾಗಿರುವುದು ಕಂಡು ಬಂದಿರುತ್ತದೆ.

**<u>ಅಪೌಷ್ಠಿಕತೆಯನ್ನು ನಿವಾರಿಸಲು ಇಲಾಖೆಯು ತೆಗೆದುಕೊಂಡ ಕ್ರಮಗಳು :</u>**

- ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪ್ರತಿ ದಿನ ನೀಡಲಾಗುತ್ತಿರುವ ರೂ.21/- ರ ಮೌಲ್ಯದ ಆಹಾರದಲ್ಲಿ 40% ಪೌಷ್ಠಿಕಾಂಶ (RDA) ಒಳಗೊಂಡಿರುತ್ತದೆ. ಈ ಆಹಾರವು 1342 ಕ್ಯಾಲೋರಿಸ್, 41 ಗ್ರಾಂ ಪ್ರೋಟೀನ್ ಮತ್ತು 578 mg ಕ್ಯಾಲ್ಸಿಯಂ ಒಳಗೊಂಡ ಪೌಷ್ಠಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವಾಗಿದ್ದು, ಅಂಗನವಾಡಿ ಕೇಂದ್ರದಲ್ಲಿಯೇ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಈ ಬಿಸಿಯೂಟದಲ್ಲಿ ಅನ್ನ, ಸಾಂಬಾರು, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, 200 ಎಂ.ಎಲ್. ಹಾಲು ಮತ್ತು ಶೇಂಗಾಚಿಕ್ಕಿಯನ್ನು ನೀಡಲಾಗುತ್ತಿದೆ.

- ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರದಲ್ಲಿ ಪ್ರತಿ ದಿನ ರೂ.8.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ತೀವ್ರ ಅಪೌಷ್ಠಿಕ ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.
- ಅಂಗನವಾಡಿಗೆ ಹಾಜರಾಗುವ 3 ವರ್ಷದಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 3 ವರ್ಷದ ಎಲ್ಲಾ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲೀ. ಹಾಲು ನೀಡಲಾಗುತ್ತಿದೆ.
- 6 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ಮತ್ತು 5 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಇಲ್ಲಿಯ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ಹಾಗೂ 3 ದಿನ 200 ಎಂ.ಎಲ್ ಹಾಲನ್ನು, ಮೊಟ್ಟೆ ಸ್ವೀಕರಿಸದಿರುವ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.

- ತೀವ್ರ ಅಪೌಷ್ಠಿಕ ಮಕ್ಕಳಿಗೆ ಆರೋಗ್ಯ ಇಲಾಖೆಯ NRC ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
- ಆರೋಗ್ಯ ಮತ್ತು ಪೌಷ್ಠಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಠಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಠಿಕತೆಯುಳ್ಳ ಆಹಾರವನ್ನು ನೀಡಲು ತಿಳುವಳಿಕೆ ನೀಡಲಾಗುತ್ತದೆ.
- ಪ್ರತಿ ತಿಂಗಳು ನಡೆಸುವ ತಾಯಂದಿರ ಸಭೆಗಳಲ್ಲಿ ಅಪೌಷ್ಠಿಕತೆ ನಿವಾರಣೆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ತಾಯಂದಿರುಗಳಿಗೆ ತಿಳುವಳಿಕೆ ನೀಡಲಾಗುತ್ತದೆ.
- ಪೋಷಣ್ ಅಭಿಯಾನ ಯೋಜನೆಯಡಿ ಪ್ರತೀ ತಿಂಗಳು ಎರಡು ಬಾರಿ ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.
- ಅಂಗನವಾಡಿ ಕೇಂದ್ರಗಳಲ್ಲಿ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯಮಿತವಾಗಿ ನಡೆಸಲಾಗುತ್ತಿದೆ.
- ಮುಂದುವರೆದು, ಪೋಷಣ್ ಅಭಿಯಾನ್ ಯೋಜನೆಯ ಪ್ರಮುಖ ಉದ್ದೇಶಗಳ ಪ್ರಗತಿಯನ್ನು ಮತ್ತು ಪೋಷಣ್ ಯೋಜನೆಯ ಅನುಷ್ಠಾನದ ಬಗ್ಗೆ ಪರಿಶೀಲನೆ ಮಾಡಲು 3 ಹಂತದಲ್ಲಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಗಳ ವಿವರ ಈ ಕೆಳಕಂಡಂತಿದೆ.

1. ರಾಜ್ಯ ಸಮನ್ವಯ ಸಮಿತಿ (State convergence committee)
2. ಜಿಲ್ಲಾ ಸಮನ್ವಯ ಸಮಿತಿ (District convergence committee)
3. ಕ್ಷೇತ್ರ ಸಮನ್ವಯ ಸಮಿತಿ (Block convergence committee)

- ಮೇಲಿನ ಸಮಿತಿಗಳಲ್ಲಿ ಜಿಲ್ಲಾ ಸಮನ್ವಯ ಸಮಿತಿಯು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೂಪಿತವಾಗಿದೆ. ಸದರಿ ಸಮಿತಿಯ ವಿವರ ಈ ಕೆಳಕಂಡಂತಿದೆ.

| **ಜಿಲ್ಲಾಧಿಕಾರಿಗಳು** | **ಅಧ್ಯಕ್ಷರು** |
|---|---|
| ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| ಸಂಪನ್ಮೂಲ ಉತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು (ಆರ್.ಸಿ.ಹೆಚ್.ಓ.) | ಸದಸ್ಯರು |
| ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| ಜಿಲ್ಲಾ ಮುಖ್ಯ ಯೋಜನಾಧಿಕಾರಿಗಳು | ಸದಸ್ಯರು |
| ಉಪ ನಿರ್ದೇಶಕರು,<br>ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ | ಸದಸ್ಯರು |

| | |
|---|---|
| ಇಲಾಖೆ | |
| ಡಿಸ್ಟ್ರಿಕ್ಟ್ ಪ್ರಾಜೆಕ್ಟ್ ಡೈರೆಕ್ಟರ್,<br>NRLM | ಸದಸ್ಯರು |
| ಕಾರ್ಯಪಾಲಕ ಅಭಿಯಂತರರು,<br>ನೀರು ಮತ್ತು ನೈರ್ಮಲ್ಯ | ಸದಸ್ಯರು |
| ಉಪ ನಿರ್ದೇಶಕರು,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ<br>ಕಾರ್ಯದರ್ಶಿ |

- ಮೇಲ್ಕಂಡ ಸಮಿತಿಯು ಕನಿಷ್ಠ ಪ್ರತೀ 3 ತಿಂಗಳಿಗೊಮ್ಮೆ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಲು ತಿಳಿಸಲಾಗಿದೆ.
- ಪೋಷಣ್ ಅಭಿಯಾನ್ ಯೋಜನೆಯ ಅನುಷ್ಠಾನದಲ್ಲಿ ಕಂಡು ಬರುವ ಕೊರತೆಗಳನ್ನು ಮತ್ತು ಅಗತ್ಯ ಸಲಹೆ-ಸೂಚನೆಗಳನ್ನು ಸಮಿತಿಯು ನೀಡಲು ತಿಳಿಸಲಾಗಿದೆ.
- ಇಲಾಖೆಯು ತೆಗೆದುಕೊಂಡಿರುವ ಕ್ರಮಗಳಿಂದ ಅಪೌಷ್ಠಿಕತೆ ಮಟ್ಟದಲ್ಲಿ ಸುಧಾರಣೆಯಾಗಿರುವುದು ಕಂಡು ಬಂದಿರುತ್ತದೆ.

**ಸಂಖ್ಯೆ**: ಮಮಇ 334 ಐಸಿಡಿ 2021

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು